**ಶ್ರೀ ಕೆ.ಎ.ತಿಪ್ಪೇಸ್ವಾಮಿ ಹಾಗೂ ಶ್ರೀ ಎಸ್.ಎಲ್.ಬೋಜೇಗೌಡ ವಿಧಾನ ಪರಿಷತ್ತಿನ ಸದಸ್ಯರು, ಇವರ ನಿಯಮ 330 ರಡಿಯಲ್ಲಿನ ಗಮನ ಸೆಳೆಯುವ ಸೂಚನೆಗೆ ಉತ್ತರಿಸುವ ಬಗ್ಗೆ.**

**ಪ್ರಶ್ನೆ:** ಕರ್ನಾಟಕ ರಾಜ್ಯ, ದೇಶದಲ್ಲಿ ಹಾಲು ಉತ್ಪಾದನೆಯಲ್ಲಿ 2ನೇ ಸ್ಥಾನದಲ್ಲಿದೆ. ರಾಜ್ಯದಲ್ಲಿ ಪ್ರತಿ ದಿನ 18 ಕೋಟಿ ಲೀಟರ್‌ಗಳಷ್ಟು ಹಾಲು ಖಾಸಗಿ ಮತ್ತು ಸಹಕಾರಿ ವಲಯಗಳಲ್ಲಿ ಉತ್ಪಾದನೆಯಾಗುತ್ತಿದೆ. ಈ ಉತ್ಪಾದನೆಯಲ್ಲಿ ಹಾಲು ಉತ್ಪಾದಕರು ಕುಟುಂಬಗಳಿಗೆ ಬಳಕೆ ಅವಶ್ಯವಿರುವ ಹಾಲನ್ನು ಬಿಟ್ಟು ಸುಮಾರು 1.2 ಕೋಟಿ ಲೀಟರ್ ಗಳಷ್ಟು ಹಾಲು ವಿವಿಧ ಹಂತದಲ್ಲಿ ಮಾರುಕಟ್ಟೆಯಲ್ಲಿ ಮಾರಾಟವಾಗುತ್ತಿದೆ. ಈ ರೀತಿ ಲಭ್ಯವಾಗುವ ಹಾಲಿನ ಶೇಕಡಾ 70 ರಷ್ಟುಅಂದರೆ 80 ಲಕ್ಷ ಲೀಟರ್‌ಗಳಷ್ಟು ಹಾಲನ್ನು ರಾಜ್ಯದಲ್ಲಿನ ಕೆ.ಎಂ.ಎಫ್. ತನ್ನ ವಿವಿಧ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಒಕ್ಕೂಟಗಳಿಂದ ಶೇಖರಿಸುತ್ತಿದೆ. ಮುಂದುವರೆದು, ವಿವಿಧ ಜಿಲ್ಲಾ ಹಾಲು ಒಕ್ಕೂಟಗಳು ಹಾಲು ಉತ್ಪಾದಕರಿಗೆ ಸರಾಸರಿ ಪ್ರತಿ ಲೀಟ್‌ಗೆ ರೂ.28/- ಬೆಲೆ ನೀಡುತ್ತಿವೆ. ಮತ್ತು ರಾಜ್ಯ ಸರ್ಕಾರ ಪ್ರತಿ ಲೀಟರ್‌ಗೆ ರೂ.5/- ಸಹಾಯಧನವನ್ನು ನೇರವಾಗಿ ರೈತರಿಗೆ ನೀಡುತ್ತದೆ. ಆದರೆ ಹಾಲಿನಲ್ಲಿ ನಿಗದಿತ ಶೇಕಡವಾರು ಎಸ್.ಎನ್.ಎಫ್ ಮತ್ತು ಕೊಬ್ಬಿನ ಅಂಶ ಇಲ್ಲದೆ ಇದ್ದಲ್ಲಿ ಹಾಲು ಉತ್ಪಾದಕರಿಗೆ ಜಿಲ್ಲಾ ಒಕ್ಕೂಟದಿಂದ ಪ್ರತಿ ಲೀಟರಿನ ಹಾಲಿನ ಬೆಲೆ ದೊರೆಯುವುದಿಲ್ಲ ಮತ್ತು ಸರ್ಕಾರದಿಂದ ಪ್ರತಿ ಲೀಟರ್ ಹಾಲಿಗೆ ನೀಡುವ ಸಹಾಯಧನ ದಕ್ಕುವುದಿಲ್ಲ. ಈ ಮಧ್ಯೆ ಪಶು ಆಹಾರದ ದರ ಅಗಾಧವಾಗಿ ಹೆಚ್ಚಳವಾಗಿದೆ. 50 ಕೆ.ಜಿ. ಚೀಲದ ಪಶು ಆಹಾರ ರೂ.950/- ನಿಂದ ರೂ.1400/- ವರೆಗೆ ಹೆಚ್ಚಳ ಕಂಡಿದೆ. ಮುಂದುವರೆದು ನಂದಿನಿ ವಿರುದ್ಧ ಗುಜರಾತ್ ಅಮೂಲ್ ಸಂಸ್ಥೆ ಷಡ್ಯಂತರ ಹೂಡಿ ನಂದಿನಿ ಬ್ರಾಂಡಿಗೆ ದಕ್ಕೆತರಲು ತನ್ನ ಸಂಸ್ಥೆಯಿಂದ ಹಾಲು ಮತ್ತು ಮೊಸರನ್ನು ರಾಜ್ಯದ ವಿವಿದೆಡೆ ಮಾರಾಟ ಮಾಡುತ್ತಿದೆ. ರಾಜ್ಯದಲ್ಲಿ ಜಾನುವಾರು ಮೇವಿನ ಕೊರತೆ ಇದ್ದು, ಒಣ ಹುಲ್ಲು ಪ್ರತಿಟನ್‌ಗೆ ರೂ.12000/- ಗೆ ಏರಿದೆ. ಇದರಿಂದ ಸಾಮಾನ್ಯ ರೈತರ ಕಥೆ ಅಧೋಗತಿಗೆ ಇಳಿದಿದೆ. ಇನ್ನೊಂದೆಡೆ ರಾಜ್ಯದ ಗೋಶಾಲೆಗಳಲ್ಲಿ ಮೇವಿನ ಕೊರತೆಯಿಂದಾಗಿ ಗೋವುಗಳು ಬಳಲಿ ನಿತ್ರಾಣವಾಗಿವೆ. ಇಂತಹ ಸಾರ್ವಜನಿಕ ಮಹತ್ವದ ವಿಷಯವನ್ನು ಸದನದಲ್ಲಿ ಪ್ರಸ್ತಾಪಿಸುವ ಬಗ್ಗೆ.

**ಉತ್ತರ:**

ಕರ್ನಾಟಕ ಹಾಲು ಮಹಾಮಂಡಳವು ಸಹಕಾರ ಕ್ಷೇತ್ರದ ಹೈನೋದ್ಯಮದಲ್ಲಿ ದೇಶದ ಎರಡನೇ ಅತೀದೊಡ್ಡ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ. ಕಾರ್ಯ ವ್ಯಾಪ್ತಿಯಲ್ಲಿಒಟ್ಟು 15 ಜಿಲ್ಲಾ ಹಾಲು ಒಕ್ಕೂಟಗಳಡಿ 15,515 ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿವೆ. ಸಂಸ್ಥೆಯು 26.60 ಲಕ್ಷ ನೋಂದಾಯಿತ ಸದಸ್ಯರನ್ನು ಹೊಂದಿದ್ದು, ಈ ಪೈಕಿ ಪ್ರಸ್ತುತ 8,19,645 ಸದಸ್ಯರು ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಹಾಲನ್ನು ಪೂರೈಕೆ ಮಾಡುತ್ತಿದ್ದಾರೆ. ಮೇ- 2023 ರ ಅಂತ್ಯದವರೆಗೆ ಸರಾಸರಿ 78.70 ಲಕ್ಷ ಕೆ.ಜಿ. ಹಾಲನ್ನು ಶೇಖರಣೆ ಮಾಡುತ್ತಿದ್ದು, ಸಂಸ್ಥೆಯು ಪ್ರತಿ ದಿನ ರೂ.27.00 ಕೋಟಿ ಮೊತ್ತವನ್ನು ಬಟವಾಡೆ ರೂಪದಲ್ಲಿ ಗ್ರಾಮೀಣ ಪ್ರದೇಶಕ್ಕೆ ತಲುಪಿಸುತ್ತಾ ರೈತರ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯಲ್ಲಿ ಸಂಸ್ಥೆಯು ಮಹತ್ತರವಾದ ಪಾತ್ರವನ್ನು ವಹಿಸುತ್ತಿದೆ.

..2

ವಿವಿಧ ಜಿಲ್ಲಾ ಹಾಲು ಒಕ್ಕೂಟಗಳು ಹಾಲು ಉತ್ಪಾದಕರಿಗೆ, ಹಸುವಿನ ಹಾಲಿಗೆ ಪ್ರತಿ ಲೀಟರ್‌ಗೆ ಪ್ರಸ್ತುತ ಸರಾಸರಿ ರೂ.31.88/- ಬೆಲೆ ನೀಡುತ್ತಿವೆ. ಅಲ್ಲದೆ, ಕರ್ನಾಟಕ ರಾಜ್ಯ ಸರ್ಕಾರವು 2008 ನೇ ಸಾಲಿನಿಂದ **"ಕ್ಷೀರಧಾರೆ"** ಯೋಜನೆಯನ್ನು ಪ್ರಾರಂಭಿಸಿದ್ದು, ಪ್ರಸ್ತುತ ಪ್ರತಿ ಲೀಟರ್ ಗುಣಮಟ್ಟದ ಹಾಲಿಗೆ (ಶೇ.3.5 ಜಿಡ್ಡಿನಾಂಶ ಮತ್ತು ಶೇ.8.5 ಎಸ್.ಎನ್.ಎಫ್.) ರೂ.5/- ಪ್ರೋತ್ಸಾಹಧನವನ್ನು ಹಾಲು ಉತ್ಪಾದಕ ಸದಸ್ಯರಿಗೆ ನೀಡುವ ಮೂಲಕ ಕರ್ನಾಟಕ ಹಾಲು ಮಹಾಮಂಡಳಕ್ಕೆ ನಿರಂತರ ಬೆಂಬಲವನ್ನು ನೀಡುತ್ತಾ ಬಂದಿದೆ. ಸದರಿ ಯೋಜನೆ ಜಾರಿಗೆ ಬಂದ ನಂತರ ರಾಜ್ಯದಲ್ಲಿ ಹಾಲು ಉತ್ಪಾದನೆ ಪ್ರತಿ ವರ್ಷ ಹೆಚ್ಚಾಗುತಿದೆ. ಗ್ರಾಮೀಣ ಪ್ರದೇಶದಿಂದ ನಗರ ಪ್ರದೇಶಕ್ಕೆ ರೈತರು ಕೆಲಸಕ್ಕಾಗಿ ವಲಸೆ ಹೋಗುವುದನ್ನು ತಡೆಗಟ್ಟುವಲ್ಲಿ ಈ ಯೋಜನೆಯು ಪ್ರಮುಖ ಪಾತ್ರ ವಹಿಸುತ್ತಿದೆ.

ಕರ್ನಾಟಕ ಸರ್ಕಾರ **"ಕ್ಷೀರಧಾರೆ"** ಯೋಜನೆಗೆಂದು 2022-23ನೇ ಸಾಲಿನಲ್ಲಿ ಅನುವು ಮಾಡಿಕೊಂಡಿರುವ ರೂ.1200.00 ಕೋಟಿ ಮೊತ್ತದಲ್ಲಿ ಬಾಕಿ ಇದ್ದ ಸಾಮಾನ್ಯ ವರ್ಗ-100 ರಲ್ಲಿ ನವೆಂಬರ್-2022 ರಿಂದ ಫೆಬ್ರುವರಿ-2023ರ ವರೆಗೆ ರೂ.277.91 ಕೋಟಿ ಪಾವತಿಯಾಗಿದ್ದು, ಮಾರ್ಚ್-2023ರ ಮಾಹೆಯ ಪ್ರೋತ್ಸಾಹಧನ ವರ್ಗಾವಣೆ ಹಂತದಲ್ಲಿರುತ್ತದೆ. ಶೀರ್ಷಿಕೆ-422 ರ ಪರಿಶಿಷ್ಟ ಜಾತಿ ಮಾರ್ಚ್-2023 ಮತ್ತು ಏಪ್ರಿಲ್-2023ರ ಮೊತ್ತ ರೂ.7.43 ಕೋಟಿ ಪಾವತಿಯಾಗಿರುತ್ತದೆ. ಅದೇ ರೀತಿ ಲೆಕ್ಕ ಶೀರ್ಷಿಕೆ-423ರ ಪರಿಶಿಷ್ಟ ಪಂಗಡದ ಮಾರ್ಚ್-2023 ಮತ್ತು ಏಪ್ರಿಲ್-2023ರ ಮೊತ್ತ ರೂ.11.37 ಕೋಟಿ ಮೊತ್ತವನ್ನು ಡಿ.ಬಿ.ಟಿ. ಮುಖೇನ ರೈತರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಪಾವತಿ ಮಾಡಲಾಗಿರುತ್ತದೆ.

ಕರ್ನಾಟಕ ಹಾಲು ಮಹಾಮಂಡಳದ ಪಶು ಆಹಾರ ಘಟಕಗಳಿಂದ ಉತ್ಪಾದಿಸುವ ಪಶು ಆಹಾರವು ಹಾಲಿನ ಉತ್ಪಾದನೆಯಲ್ಲಿಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತಿದ್ದು, ಪಶು ಆಹಾರ ಉತ್ಪಾದನೆ ಹಾಗೂ ಮಾರಾಟದ ವ್ಯವಹಾರವನ್ನು ಕರ್ನಾಟಕ ಹಾಲು ಮಹಾಮಂಡಳವು ಲಾಭ-ನಷ್ಟವಿಲ್ಲದೆ ನಿರ್ವಹಿಸುತ್ತಾ ಬಂದಿರುತ್ತದೆ. 2019-20ನೇ ಸಾಲಿನಿಂದ ಜುಲೈ-2022ರ ಅವಧಿಯಲ್ಲಿ ಪ್ರತಿ ಟನ್ ಪಶು ಆಹಾರಕ್ಕೆ ರೂ.500/- ರಿಂದ ರೂ.2,500/- ರವರೆಗೆ ರಿಯಾಯಿತಿ ನೀಡಿದ್ದು, ಒಟ್ಟು ರೂ.194 ಕೋಟಿಗಳಷ್ಟು ಪಶು ಆಹಾರ ರಿಯಾಯಿತಿ ದರದಲ್ಲಿ ನೀಡಲಾಗಿರುತ್ತದೆ.

ಗುಜರಾತ್ ಅಮೂಲ್ ಸಂಸ್ಥೆಯು ರಾಜ್ಯದಲ್ಲಿ ಹಾಲು ಮೊಸರು ಸೇರಿ 1000 ಲೀ.ಗಿಂತ ಕಡಿಮೆ ಪ್ರಮಾಣದಲ್ಲಿ ಮಾರಾಟ ಮಾಡುತ್ತಿದ್ದು, ಕರ್ನಾಟಕ ಹಾಲು ಮಹಾಮಂಡಳ ತಾಜಾ ಮತ್ತು ಪರಿಶುದ್ಧತೆ ಹಾಲು ಮತ್ತು ಹಾಲಿನ ಉತ್ಪನ್ನಗಳಿಗೆ ಹೆಸರುವಾಸಿಯಾಗಿದ್ದು, ರಾಜ್ಯದಲ್ಲಿ ಮನೆಮಾತಾಗಿರುವ ಪ್ರಯುಕ್ತ ಅಮೂಲ್ ಯಾವುದೇ ಪರಿಣಾಮ ಗ್ರಾಹಕರ ಮೇಲೆ ಬೀರಲು ಶಕ್ಯವಾಗಿಲ್ಲ.

ಪ್ರಸ್ತುತ ರಾಜ್ಯದಲ್ಲಿ ಮುಂಗಾರು ಮಳೆ ಅಭಾವದಿಂದಾಗಿ ಒಣ ಹುಲ್ಲಿನ ಲಭ್ಯತೆ ಕಡಿಮೆ ಇದ್ದು, ಹಾಲು ಒಕ್ಕೂಟಗಳ ವತಿಯಿಂದ ಉತ್ಪಾದಕರುಗಳ ಅವಶ್ಯಕತೆಗನುಗುಣವಾಗಿ ವಿವಿಧ ತಳಿಯ ಮೇವಿನ ಬೀಜಗಳನ್ನು ಸಕಾಲದಲ್ಲಿ ಸರಬರಾಜು ಮಾಡಲಾಗಿರುತ್ತದೆ.

(ಕೆ.ವೆಂಕಟೇಶ್)
**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**